Reg. No. | | | | | | | | | |

# BBAKAL 103/BBMKAL 103

**Credit Based I Semester B.B.A./B.B.M. Degree Examination, October/November 2016**
**(New Scheme)**
**KANNADA (Common to All Batches)**
**Language (Paper – I)**

Time : 3 Hours                                                    Max. Marks : 80

ಭಾಗ – ೧ (ಕಾವ್ಯ)

I. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ವಸಿಷ್ಠ-ವಿಶ್ವಾಮಿತ್ರರ ವಾಗ್ವಾದದ ವೈಖರಿಯನ್ನು ರಾಘವಾಂಕ ಹೇಗೆ ವರ್ಣಿಸಿದ್ದಾನೆ ? ವಿವರಿಸಿ.

2) ಬದುಕಿನ ಕುರಿತಾದ ಚಿಂತನೆ 'ಬಾಳೊಂದು ವಿಜಯದ ಬೀಡು' ಎಂಬ ಪದ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.

ಆ) **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಹೆಣ್ಣು, ಹೊನ್ನು, ಮಣ್ಣು – ಈ ಮೂರು ಮನುಷ್ಯನ ಬಾಳಿನಲ್ಲಿ ದುಃಖ ಹಾಗೂ ಅಶಾಂತಿಗೆ ಕಾರಣವಾಗುವುದನ್ನು ಪುರಂದರದಾಸರು ಹೇಗೆ ಅಭಿವ್ಯಕ್ತಗೊಳಿಸಿದ್ದಾರೆ ?

2) 'ರಂಗೋಲಿ ಮತ್ತು ಮಗ' ಕವಿತೆಯಲ್ಲಿ ಮೂಡಿ ಬಂದಿರುವ ವಿಭಿನ್ನ ಸಂಸ್ಕೃತಿಗಳ ನಡುವಿನ ತಾಕಲಾಟಗಳನ್ನು ಪ್ರಸ್ತುತ ಪಡಿಸಿ.

ಇ) **ಎರಡು** ವಿಷಯಗಳಿಗೆ ಟಿಪ್ಪಣಿ ಬರೆಯಿರಿ. **(2×3=6)**

1) ಪಂಪ

2) ಎಂ. ಗೋಪಾಲಕೃಷ್ಣ ಅಡಿಗ

3) ಸುಬ್ಬು ಹೊಲೆಯಾರ್.

II. ಅ) **ಒಂದು** ಪದ್ಯದ ಸಂದರ್ಭವನ್ನು ಸೂಚಿಸಿ, ಅದರ ಭಾವವನ್ನು ವಿವರಿಸಿ. **(1×5=5)**

1) ಒದವಿದ ನಿನ್ನದೊಂದು ದಯೆ ಮೇಣ್ ಪಿರಿದೋ ನೆಗೞ್ದಿನ್ನ
ಗಂಡುಮಾ
ದದಟುಮಳುರ್ಕೆಯುಂ ಪಿರಿದೋ ಸಂದೆಯ ಮಾದಪು
ದಿಂತಿದಿಲ್ಲ ತೂ।

P.T.O.

ಗಿಡೊಡಚೆಯಲ್ಕೆ ಬಾರದದು ಕಾರಣದಿಂ ರಿಪು
ಭೂಪ ದಂತಿ ದಂ
ತದ ತೊಲೆಯೊಳ್ ಪರಾಕ್ರಮದಿನೆನ್ನನೆ ಭೂಪತಿ
ತೂಗಿ ತೋಱೆನೇ ॥

2) ಕುರುಕ್ಷೇತ್ರ ಬಾಚುತ್ತಲಿದೆ ದೇಶದುದ್ದಕ್ಕೂ ಪಾತ್ರಗಳೇನೋ
ಅವೇ; ಪಾತ್ರಧಾರಿಗಳು ಬೇರೆ, ಬೇರೆ;
ದುರ್ಯೋಧನನಿಗೆ ಯುಧಿಷ್ಠಿರ ವೇಷ ಶಕುನಿಯೇ
ಶ್ರೀಕೃಷ್ಣ; ಪಾರ್ಥನ ವೇಷ ಉತ್ತರನಿಗೆ.

ಆ) ಎರಡು ವಾಕ್ಯಗಳಿಗೆ ಸಂದರ್ಭ ಸ್ವಾರಸ್ಯ ವಿವರಿಸಿ. **(2×3=6)**

1) ಜೋಳದ ಪಾಟೆಯಂ ನೆರಪಿದಂ ಗಂಡಂ ಪೆಱಂ ಗಂಡನೆ ?
2) ಅಸ್ಥಿರದ ದೇಹವನು ನೆಚ್ಚಿ ನೀ ಕೆಡಬೇಡ.
3) ಕಾಫರನ ಬಿರುದು ಹೆತ್ತವಳಿಂದ ಹೊತ್ತಿದ್ದೆ.

III. ಒಂದೊಂದು ವಾಕ್ಯದಲ್ಲಿ ಉತ್ತರಿಸಿ. **(5×1=5)**

1) ಪಂಪನ ಕಾವ್ಯಗಳ ಹೆಸರೇನು ?
2) 'ಕರ್ನಾಟಕ ಸಂಗೀತ ಪಿತಾಮಹ' ಎಂಬ ಬಿರುದಾಂಕಿತರು ಯಾರು ?
3) 'ನವ್ಯ ಮಾರ್ಗದ ಪ್ರವರ್ತಕ' ಎಂದು ಯಾರನ್ನು ಕರೆಯುತ್ತಾರೆ ?
4) 'ನಿತ್ಯೋತ್ಸವದ ಕವಿ' ಎಂದು ಪ್ರಸಿದ್ಧರಾದ ಕವಿ ಯಾರು ?
5) 'ಹರಿಶ್ಚಂದ್ರ ಕಾವ್ಯ' ಯಾವ ಷಟ್ಪದಿಯಲ್ಲಿದೆ ?

## ಭಾಗ - ೨ (ಗದ್ಯ)

IV. ಅ) ಒಂದು ಪ್ರಶ್ನೆಗೆ ಉತ್ತರಿಸಿ. **(1×8=8)**

1) 'ಪ್ರಭುಸಮ್ಮಿತ' ಕಥೆಯಲ್ಲಿ ಕೃಷಿ ಸಂಸ್ಕೃತಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
2) 'ದೇವರೇ ಬರಲಿಲ್ಲ' ಕಥೆಯ ಆಶಯವೇನು ? ವಿವರಿಸಿ.

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಸಾಹಿತ್ಯ ಹಾಗೂ ಬದುಕಿನ ಬಗ್ಗೆ ವಿ.ಸೀ.ಯವರ ಅಭಿಪ್ರಾಯಗಳು ಅವರ ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿದೆ ? ವಿವರಿಸಿ.
2) 'ಹುಲಿಸವಾರಿ' ಕಥೆಯಲ್ಲಿನ ಉಚೆಯ ಪಾತ್ರವನ್ನು ಚಿತ್ರಿಸಿ.

ಇ) ಒಂದು ಪ್ರಶ್ನೆಗೆ ಉತ್ತರಿಸಿರಿ. (1×5=5)

1) ಪ್ರಬಂಧಕಾರರು ಮುದುಕನೊಬ್ಬನಿಂದ ಮೋಸಹೋದ ಬಗೆಯನ್ನು ವಿವರಿಸಿ.

2) 'ಪುಟ್ಟ ಗುಬ್ಬಿ ಕೇಳಿದ ದೊಡ್ಡ ಪ್ರಶ್ನೆ' ಪ್ರಬಂಧದ ಆಶಯವೇನು ?

V. ಒಂದು ವಿಷಯವನ್ನು ಕುರಿತು ಟಿಪ್ಪಣಿ ಬರೆಯಿರಿ. (1×5=5)

1) ಅನ್ಯರ ವಿಷಯದಲ್ಲಿ ಮನುಷ್ಯನಲ್ಲಿರಬೇಕಾದ ತಾಳ್ಮೆ.

2) ಪರಿಸರ ಮಾಲಿನ್ಯದಿಂದಾಗುವ ಅನಾಹುತಗಳು.

3) ಲೋಕಕಲ್ಯಾಣ ಹಾಗೂ ಸೌಮನಸ್ಯ.

VI. ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (4×1=4)

1) 'ದೇವರೇ ಬರಲಿಲ್ಲ' ಕಥೆಯನ್ನು ಬರೆದವರಾರು ?

2) ವಿ.ಸೀ.ಯವರ ಪ್ರಬಂಧದ ಹೆಸರೇನು ?

3) ಪೀಟರ್ ಎಲ್ಲಿಯವನು ?

4) ಎಚ್.ಎಸ್. ವೆಂಕಟೇಶಮೂರ್ತಿಯವರ ಆತ್ಮಚರಿತ್ರೆಯ ಹೆಸರೇನು ?

## ಭಾಗ – ೨ (ಕ್ರಿಯಾತ್ಮಕ ಕನ್ನಡ)

VII. ಒಂದು ಪ್ರಶ್ನೆಗೆ ಉತ್ತರಿಸಿರಿ. (1×8=8)

1) ಜಾಹೀರಾತು ಎಂದರೇನು ? ಅದರ ಉದ್ದೇಶ ಹಾಗೂ ಪಾತ್ರವನ್ನು ಕುರಿತು ವಿವರಿಸಿ.

2) ವೃತ್ತಪತ್ರಿಕೆ ಹಾಗೂ ಓದುಗರ ನಡುವಿನ ಸಂಬಂಧಗಳನ್ನು ವಿವರಿಸಿ.

VIII. ಒಂದು ಪ್ರಶ್ನೆಗೆ ಉತ್ತರಿಸಿರಿ. (1×5=5)

1) ಆಹ್ವಾನ ಪತ್ರಿಕೆಯ ಸ್ವರೂಪವನ್ನು ವಿವರಿಸಿ.

2) ಗುಮಾಸ್ತ ಹುದ್ದೆಗೆ ಸಂಬಂಧಿಸಿದಂತೆ ಅಭ್ಯರ್ಥನ ಪತ್ರವೊಂದನ್ನು ಸಿದ್ಧಪಡಿಸಿ.

IX. ಒಂದೊಂದು ವಾಕ್ಯದಲ್ಲಿ ಉತ್ತರಿಸಿ. (2×1=2)

1) ಪತ್ರಿಕೆಗಳ ಮುಖ್ಯ ಆದಾಯದ ಮೂಲ ಯಾವುದು ?

2) 'ಅಮುಲ್'ನ ಘೋಷವಾಕ್ಯ ಯಾವುದು ?

---